ಎಂ.ವಿ.ಸಿ.781/2022, ಪಿ.ಡಬ್ಲ್ಯೂ.1 ಹೆಸರುಃ ಮೊಹಮ್ಮದ್ ಖಲೀಂ

**ದಿಃ17-09-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಎಸ್.ವಿ. ವಕೀಲರಿಂದಃ**

ನಾನು ವಿದ್ಯಾಬ್ಯಾಸ ಮಾಡಿಲ್ಲ. ನನ್ನ ಸ್ವಂತ ಊರು ಕರೆಕಟ್ಟೆ ಗ್ರಾಮ, ಚನ್ನಗಿರಿ ತಾಲ್ಲೂಕು. ನಾನು ಈಗಲೂ ಸಹ ಕರೆಕಟ್ಟೆ ಗ್ರಾಮದಲ್ಲಿಯೇ ವಾಸವಿದ್ದು, ನನಗೆ ಸಂಬಂಧಿಸಿದ ಆಧಾರ್ ಕಾರ್ಡ್ ದಾಖಲಾತಿ ಕರೆಕಟ್ಟೆ ಗ್ರಾಮದ ವಿಳಾಸದಲ್ಲಿಯೇ ಇದೆ. ನಾನು ಸಲ್ಲಿಸಿರುವ ಅರ್ಜಿಯಲ್ಲಿ ನನ್ನ ವಿಳಾಸದ ಕುರಿತು ಕೇರಾಫ್ ಸೈಯದ್ ಶಾಬುದ್ದೀನ್ ಹುಸೇನ್, ಖಾಜಿ ಮೊಹಲ್ಲ, ಹೊಳಲ್ಕೆರೆ ಎಂದು ನಮೂದು ಮಾಡಿಲ್ಲ. ನಾನು ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಿದ್ದೆನು. ಅಪಘಾತದ ನಂತರ ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಅಡಿಕೆ ವ್ಯಾಪಾರ ಮಾಡುತ್ತಿದ್ದೆನು. ನಾನು ಹಳ್ಳಿಗಳಲ್ಲಿ ಅಡಿಕೆ ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದೆನು. ನಾನು ಅಡಿಕೆ ವ್ಯಾಪಾರ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿ ಇಲ್ಲ.

2. ನಾನು ಅಪಘಾತ ಏರ್ಪಟ್ಟ ಸಮಯದಲ್ಲಿ ಲಗೇಜ್ ಆಟೋದಲ್ಲಿ ಹೋಗುತ್ತಿದ್ದೆನು. ನಾನು ಚಾಲಕನ ಪಕ್ಕದ ಸೀಟಿನಲ್ಲಿ ಕ್ಯಾಬೀನ್‌ನಲ್ಲಿ ಕುಳಿತುಕೊಂಡು ಹೋಗುತ್ತಿದ್ದೆನು. ನಾನು ಆಟೋವನ್ನು ಸಂತೆಗೆ ಬಾಡಿಗೆಗೆ ಕರೆದುಕೊಂಡು ಹೋಗಿದ್ದೆನು. ಸದರಿ ಆಟೋ ನಮ್ಮ ಗ್ರಾಮಕ್ಕೆ ಸೇರಿದ ರುದ್ರೇಶ್‌ರವರಿಗೆ ಸೇರಿತ್ತು. ರುದ್ರೇಶ್‌ರವರು ನನಗೆ 5 ವರ್ಷಗಳಿಂದ ಪರಿಚಯ ಇದ್ದಾರೆ. ನಾನು ಅಪಘಾತ ಏರ್ಪಟ್ಟ ಸಮಯದಲ್ಲಿ ಲಗೇಜ್ ಆಟೋದಲ್ಲಿ ಪ್ರಯಾಣಿಕನಾಗಿ ಹೋಗುತ್ತಿದ್ದೆನು.

3. ಅಪಘಾತದ ಕುರಿತು ಪೊಲೀಸರಿಗೆ ದೂರನ್ನು ನಾನೆ ನೀಡಿರುತ್ತೇನೆ. ನಾನು ದೂರನ್ನು ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಅಪಘಾತ ಏರ್ಪಟ್ಟ ದಿನದಂದೆ ನಾನು ದೂರನ್ನು ನೀಡಿರುತ್ತೇನೆ. ಅಪಘಾತ ದಿನಾಂಕ 28.04.2022 ರಂದು ಏರ್ಪಟ್ಟಿದ್ದು, ನಾನು ದೂರನ್ನು ದಿನಾಂಕ 29.04.2022 ರಂದು ನೀಡಿರುತ್ತೇನೆ ಎಂದರೆ ಸಾಕ್ಷಿ ಅಪಘಾತದ ದಿನದಂತೆ ದೂರನ್ನು ನೀಡಿದ್ದೇನೆ ಎಂದು ಹೇಳುತ್ತಾರೆ. ನಿಪಿ.2 ರ ದೂರಿನಂತೆ ಒಂದು ದಿನ ವಿಳಂಬವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಡಿಕೆ ತರಲು ಹೋಗುತ್ತಿದ್ದೆನು ಎಂದು ಉಲ್ಲೇಖಿಸುವ ಸಲುವಾಗಿ ಒಂದು ದಿನ ವಿಳಂಬವಾಗಿ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಲಗೇಜ್ ಆಟೋದಲ್ಲಿ ಚಾಲಕನಾಗಿ ಹೋಗಿರುವ ಕಾರಣ ಯಾವುದೇ ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

4. ಅಪಘಾತದ ಪರಿಣಾಮ ನನ್ನ ಬಲಗಾಲಿಗೆ ಪೆಟ್ಟಾಗಿರುತ್ತದೆ. ಅಪಘಾತದ ನಂತರ ಮೊದಲು ಸಂತೆ ಬೆನ್ನೂರಿನ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ಆಗುವುದಿಲ್ಲ ಎಂದು ಶಿವಮೊಗ್ಗಕ್ಕೆ ಕಳುಹಿಸಿದರು. ಶಿವಮೊಗ್ಗದ ಅಶೋಕ ಸಂಜೀವಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಶಿವಮೊಗ್ಗದ ಅಶೋಕ ಸಂಜೀವಿನಿ ಆಸ್ಪತ್ರೆಯಲ್ಲಿ ವೈದ್ಯರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಗಾಯದ ಪ್ರಮಾಣ ಪತ್ರವನ್ನು ಅಶೋಕ ಸಂಜೀವಿನಿ ಆಸ್ಪತ್ರೆರವರು ನೀಡಿರುತ್ತಾರೆ ಎಂದರೆ ಸರಿ. ನಾನು ಅಶೋಕ ಸಂಜೀವಿನಿ ಆಸ್ಪತ್ರೆಗೆ ದಾಖಲಾದ ಕಾಲಕ್ಕೆ ನಾನು ನಡೆದುಕೊಂಡು ಹೋಗುತ್ತಿದ್ದಾಗ ಅಪಘಾತ ಆಗಿದೆ ಎಂದು ಉಲ್ಲೇಖ ಇದೆ ಎಂದರೆ ಸರಿಯಲ್ಲ. ನಿಪಿ.7 ರ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಅಂಶಗಳಿಗೂ ಹಾಗೂ ನಿಪಿ.1 ರಿಂದ 3 ರ ದೂರು, ಪ್ರಥಮ ವರ್ತಮಾನ ವರದಿ ಹಾಗೂ ದೋಷಾರೋಪಣ ಪಟ್ಟಿಯಲ್ಲಿನ ಅಂಶಗಳಿಗೂ ಒಂದಕ್ಕೊಂದು ವ್ಯತಿರಿಕ್ತತೆ ಇದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಪಘಾತ ಆಗದಿದ್ದಾಗ್ಯೂ, ಗಾಯದ ಪ್ರಮಾಣ ಪತ್ರವನ್ನು ಮತ್ತು ತನಿಖಾಧಿಕಾರಿಗಳು ನೀಡಿರುವ ದಾಖಲೆಗಳನ್ನು ಸೃಷ್ಠಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.12(1) ರಿಂದ 12(87) ಹಾಗೂ ನಿಪಿ.13(1) ರಿಂದ 13(31) ರ ದಾಖಲಾತಿಗಳನ್ನು ಹಾಗೂ 15(1) ರಿಂದ 15(8)ರವರೆಗಿನ ದಾಖಲೆಗಳನ್ನು ಪರಿಹಾರವನ್ನು ಪಡೆಯುವ ಸಲುವಾಗಿ ಸೃಷ್ಠಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿಕೊಂಡು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ